# ಒಡವೆಗಳಲ್ಲಿ ಹಕ್ಕಿಗಳ ಕಲರವ



ಚಿನ್ನದ ಒಡವೆಗಳಲ್ಲಿ ಹಕ್ಕಿಗಳು ಕಲರವ ಮಾಡಲಾಂಭಿಸಿವೆ. ಆಭರಣಗಳಲ್ಲಿ ಗಿಣಿ, ನವಿಲು, ಗಂಡಭೇರುಂಡ, ಕೋಗಿಲೆ, ಹಂಸ ಮೊದಲಾದ ಪಕ್ಷಿಗಳು ಮೈದಳೆಯುತ್ತಿದ್ದು ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿವೆ.

■ ಸುಮಾ ಬಿ.

ಆಭರಣಗಳಲ್ಲಿ ಹಕ್ಕಿಗಳ ಕಲರವ... ಹೀಗೆ ಕೇಳುತ್ತಿದ್ದಂತೆ ಬಹುತೇಕರ ಕಣ್ಣುಗಳು ಅಚ್ಚರಿಯಿಂದ ಅರಳಬಹುದು... ಇದುವರೆಗೂ 'ಬಾನಲ್ಲಿ ಹಕ್ಕಿಗಳ ಕಲರವ', 'ಕೆರೆಗಳಲ್ಲಿ ವಲಸೆ ಹಕ್ಕಿಗಳ ಕಲರವ' ಕೇಳಿದ್ದೆವು ಹೌದು, ಆಭರಣಗಳಲ್ಲಿ ಹಕ್ಕಿಗಳು ಚಿಲಿಪಿಲಿಗುಡಲು ಶುರುವಿಟ್ಟು ಬಹುಕಾಲವೇ ಆಯಿತು. ರಾಜ ರಾಣಿಯರ ಆಭರಣಗಳಲ್ಲಿ ಗಿಜಿಗುಡುತ್ತಿದ್ದ ಹಕ್ಕಿಗಳು ಈಗ 'ಆ್ಯಂಟಿಕ್' ಹೆಸರಲ್ಲಿ ಮುನ್ನೆಲೆಗೆ ಬಂದಿವೆ. ಎಲ್ಲ ಬಗೆಯ ಒಡವೆಗಳಲ್ಲೂ ಹಕ್ಕಿಗಳ ಚಿಲಿಪಿಲಿ ಗಾನ ಜೋರಾಗಿಯೇ ಹೊಮ್ಮುತ್ತಿದೆ. ಅದೀಗ ಫ್ಯಾಷನ್ ಟ್ರೆಂಡ್ ಆಗಿ ಆಭರಣಪ್ರಿಯರ ಮನ ಕದ್ದಿದೆ.

ಭಾರತೀಯ ಸಾಂಪ್ರದಾಯಿಕ ಆಭರಣಗಳ ಶೈಲಿಯೇ ಭಿನ್ನ. ಒಡವೆಗಳ ವಿನ್ಯಾಸ ಕಾಲಕ್ಕೆ ತಕ್ಕಂತೆ ಹೊರಳು ಹಾದಿಯಲ್ಲಿ ಸಾಗಿದರೂ ದೇಸೀತನವನ್ನು ಬಿಟ್ಟುಕೊಡದೆ, ಆಧುನಿಕತೆಯನ್ನು ಹೊತ್ತ ಆಭರಣಗಳು ಹೊಸ ಟ್ರೆಂಡ್ ಸೃಷ್ಟಿಸಿವೆ.

ಇತಿಹಾಸ, ಪರಂಪರೆ, ದೇಗುಲ, ಪ್ರಕೃತಿ, ಐತಿಹಾಸಿಕ ಸ್ಮಾರಕಗಳು, ಕಲೆ... ಹೀಗೆ ಹಲವು ವಿಷಯ ಆಧಾರಿತ ಆಭರಣಗಳು ಈಗ ಆ್ಯಂಟಿಕ್ ಜುವೆಲ್ಲರಿ ಹೆಸರಲ್ಲಿ ರೂಪು ತಳೆಯುತ್ತಿವೆ. ಶಾಂತಿ, ಪ್ರೀತಿ, ಸಂತೋಷ, ಸಂಭ್ರಮ, ಧೈರ್ಯದ ಸಂಕೇತವಾದ ಹಕ್ಕಿಗಳ ವಿನ್ಯಾಸಗಳು ಅನಾದಿ ಕಾಲದಿಂದಲೂ ಆಭರಣಗಳಲ್ಲಿ ಒಡಮೂಡುತ್ತಿವೆ. ಸಾಂಪ್ರದಾಯಿಕತೆಯನ್ನೂ ಮೆರೆಸುತ್ತ ದಿನಕ್ಕೊಂದು ರೂಪು ಪಡೆಯುತ್ತಿರುವ ಆಭರಣಗಳಲ್ಲಿ ಈಗ ಹಕ್ಕಿಗಳ ಗಾನ ಜೋರಾಗೇ ಕೇಳಿಸುತ್ತಿದೆ.